# ಸಾದಿರ್

ಬ್ರಿಟಿಷರು ಭಾರತಕ್ಕೆ ಬಂದ ನಂತರ ಹಂತ ಹಂತವಾಗಿ ಭಾರತೀಯ ಕಲೆ, ಸಂಸ್ಕೃತಿಯ ಮೇಲೂ ಹಿಡಿತ ಸಾಧಿಸಿದರು. ಇದರ ಜೊತೆಗೆ ಇಂಗ್ಲೆಂಡಿನಲ್ಲಿ ಬೇರೂರಿದ್ದ ಶಿಕ್ಷಣ, ಲೈಂಗಿಕತೆ, ಸ್ತ್ರೀ ಸ್ವಾತಂತ್ರ್ಯ. ಕುಟುಂಬ ಕುರಿತಾದ ಚಿಂತನೆಗಳೂ ಸಹ ಕಾಲಿಟ್ಟವು. ಅದುವರೆಗೂ ಇಲ್ಲಿ ಬಳಕೆಯಲ್ಲಿದ್ದ ಸಂಗೀತ, ನೃತ್ಯ ಕಲೆಗಳು ದೈವದ ಆರಾಧನೆಯ ಭಾಗವಾಗಿಯೇ ಹುಟ್ಟಿಕೊಂಡಿದ್ದನ್ನು ನಾವು ಒಪ್ಪಿಕೊಂಡಿದ್ದೆವು. ನೃತ್ಯ–ನಾಟಕಗಳು ಹೆಣ್ಣನ್ನೂ ಒಳಗೊಂಡಂತೆ ಶೂದ್ರರಿಗಾಗಿಯೇ ಸೃಷ್ಟಿಸಲ್ಪಟ್ಟ ಕಲೆಗಳೆಂದು ಕರೆಸಿಕೊಂಡಿದ್ದವು. ಈ ಕಲಾ ಪ್ರಕಾರಗಳ ಕಲಾವಿದರು ಕೂಡ ಕೆಳವರ್ಗದಿಂದಲೇ ಬಂದವರಾಗಿದ್ದರು. ಇಂಗ್ಲಿಷ್ ವಿದ್ಯಾಭ್ಯಾಸ ಹೆಣ್ಣುಮಕ್ಕಳಿಗೆ ಶಿಕ್ಷಣವನ್ನು ಒದಗಿಸಿದರೂ ಹೆಣ್ಣು ಗಂಡಿನ ಆಶ್ರಯದಲ್ಲಿಯೇ ಇರಬೇಕು ಎಂಬ ಸನಾತನ ನಂಬಿಕೆ ಬದಲಿಸುವ ಪ್ರಯತ್ನಕ್ಕೇನು ಕೈ ಹಾಕಲಿಲ್ಲ.

ಈ ಬದಲಾವಣೆಗಳು ವಿಶೇಷವಾಗಿ ಕೆಳವರ್ಗದ, ಅದರಲ್ಲೂ ನೃತ್ಯ ಸಂಗೀತವನ್ನು ಆತ್ಮತೃಪ್ತಿಗಾಗಿ, ಉದರ ಪೋಷಣೆಗಾಗಿ ಅವಲಂಬಿಸಿದ್ದ ದೇವದಾಸಿ ಸಮುದಾಯಕ್ಕೆ ಪೆಟ್ಟುಕೊಟ್ಟವು. ಕಲಾಪೋಷಕರು ಮತ್ತು ದೇವಾಲಯದ ಉಂಬಳಿಗಳ ಸುತ್ತ ಬದುಕು ಕಟ್ಟಿಕೊಂಡಿದ್ದ ದೇವದಾಸಿಯರು ರಾಜಕೀಯದ ಜೊತೆ ಕಾಲಿಟ್ಟ 'ಸಾಮಾಜಿಕ–ನೈತಿಕ ಸ್ವಾಸ್ಥ್ಯ'ದ ಪ್ರಶ್ನೆಗಳಿಂದಾಗಿ ತತ್ತರಿಸಿ ಹೋದರು. ಒಂದು ರೀತಿಯಾಗಿ ಸಮಾಜ ಸುಧಾರಕರು, ಸಂಪ್ರದಾಯವಾದಿಗಳ ನಡುವೆ ಹೋರಾಟವೇ ನಡೆದುಹೋಯಿತು. ಸಮಾಜ ಸುಧಾರಕರು ಮಹಿಳೆಯ ಪ್ರಗತಿಯೇ ತಮ್ಮ ಗುರಿಯೆಂದರೆ ಸಂಪ್ರದಾಯವಾದಿಗಳು ಹೆಣ್ಣನ್ನು, ಹೆಣ್ಣನ್ನು ಕುರಿತಾದ ಲೈಂಗಿಕ ಕಲ್ಪನೆಗಳನ್ನು, ಕೆಳವರ್ಗದ ದೇವದಾಸಿಯರ ಬದುಕನ್ನು ಯಥಾಸ್ಥಿತಿಯಲ್ಲಿಯೇ ನೋಡ ಬಯಸಿದರು. ಈ ಘರ್ಷಣೆಗಳ ಕಾಲದಲ್ಲಿ ದೇವದಾಸಿಯರನ್ನು ದೇವಸ್ಥಾನಕ್ಕೆ ಅರ್ಪಿಸುವ ವೈಭವದ ಸಮಾರಂಭಗಳನ್ನು, ನರ್ತಕಿಯರಾದ ಸಂಗೀತಗಾರ್ತಿಯರಾದ ಇವರು ದೇವಸ್ಥಾನದ ಕಾರ್ಯಗಳಲ್ಲಿ ಭಾಗವಹಿಸುವುದನ್ನು ಪ್ರಶ್ನಿಸಲಾಯಿತು. ಖಾಸಗಿ ಸಮಾರಂಭಗಳಲ್ಲಿ ನೃತ್ಯ–ಸಂಗೀತಗಳ ಔಚಿತ್ಯ ಪ್ರಶ್ನಿಸಲಾಯಿತು. ನಾಚ್ ಮತ್ತು ನಾಚ್‌ವಾಲಿಯರು ಸಮಾಜದ ನೈತಿಕತೆ ಹಾಳು ಮಾಡುವುದರ ವಿರುದ್ಧ 'ನಾಚ್ ವಿರೋಧಿ ಚಳವಳಿ' ಕಾಲಿಟ್ಟಿತು. ಕಲೆಯ ಅಭಿವ್ಯಕ್ತಿಯೇ ತಮ್ಮ ಜೀವನದ ಗುರಿ ಎಂದು ನಂಬಿದ ಕಲಾವಿದೆಯರಿಗೆ ಇದು ಬಲವಾದ ದಾಳಿಯೆನಿಸಿತು. ತಮ್ಮ ಬದುಕಿನ ಆಧಾರವಾದ ಕಲೆಯನ್ನು ಬಿಟ್ಟು ಬದುಕುವುದು ಹೇಗೆ ಎಂಬ ಪ್ರಶ್ನೆ ಕಾಡಿತು. ಅಷ್ಟೇ ಅಲ್ಲ, ದೇಶೀ ಮೂಲವಾದ ಈ ಪರಂಪರೆಯನ್ನು ಅಭಿಜಾತ ಕಲಾವಿದರು ತಮ್ಮಿಂದ ಕಿತ್ತುಕೊಂಡು ಅದರ ಮಾಲೀಕರಾಗುವ ವಸಾಹಾತುಶಾಹೀ ಪ್ರಜ್ಞೆಯ ದಬ್ಬಾಳಿಕೆಯಾಗಿಯೂ ಕಾಡಿತು.

ಒಂದು ಕಾಲದಲ್ಲಿ ನೃತ್ಯ ದ್ರಾವಿಡರ ಪ್ರಿಯವಾದ ಮನೋರಂಜನೆಯ ಪ್ರಕಾರವಾಗಿತ್ತು. ಇಂದು ಭರತನಾಟ್ಯವೆಂದು ಕರೆಸಿಕೊಳ್ಳುತ್ತಿರುವ ಕಲಾಪ್ರಕಾರ ಭರತನು ರೂಪಿಸಿದ ನಾಟ್ಯ ಪ್ರಕಾರವಲ್ಲ. 1930ರವರೆಗೆ ಈ ವರ್ಗಗಳ ನೃತ್ಯವನ್ನು 'ಸಾದಿರ್' ಎಂದು ಕರೆಯಲಾಗುತ್ತಿತ್ತು. 'ಸಾದಿರ್' ಕ್ರಮೇಣ ಮೇಲ್ವರ್ಗದವರ ಕೈಯಲ್ಲಿ ಸಿಲುಕಿ 'ಭರತನಾಟ್ಯ'ವಾಗಿ ಪರಿವರ್ತಿತವಾಯಿತು. ತಲತಲಾಂತರಗಳಿಂದ ಕುಟುಂಬದ ಆಸ್ತಿಯೆನ್ನುವಂತೆ ಈ ಪ್ರಕಾರವನ್ನು ಕಾಪಾಡಿಕೊಂಡು ಬಂದಿದ್ದ ದೇವದಾಸಿಯರಿಗೆ ಅಸ್ತಿತ್ವದ ಪ್ರಶ್ನೆಯಾಗಿತ್ತು. ಅದುವರೆಗೂ ದೇವದಾಸಿಯರು ಯಾರಾದರೊಬ್ಬ ಸ್ಥಿತಿವಂತ ಗಂಡಿನ ಆಶ್ರಯದಲ್ಲಿ ಬದುಕುತ್ತಿದ್ದವರು ಈಗ ನೆಲೆ ಕಳೆದುಕೊಂಡು ಜೀವನೋಪಾಯಕ್ಕಾಗಿ ಹುಡುಕಾಟ ನಡೆಸುವಂತಾಯಿತು. ದೇವಸ್ಥಾನದ ಉಂಬಳಿಗಳನ್ನು ಒಳಗೊಂಡಂತೆ ದೊರಕುತ್ತಿದ್ದ ಸೌಲಭ್ಯಗಳು, ಮದುವೆ ಮುಂತಾದ ಕಾರ್ಯಕ್ರಮಗಳೂ ಇಲ್ಲವಾದವು. ಉಳಿದ ವರ್ಗದ ಹೆಣ್ಣುಮಕ್ಕಳಿಗೆ ಹೋಲಿಸಿದರೆ ಅವರು ವಿದ್ಯಾವಂತರಾಗಿದ್ದರು. ಸಂಸ್ಕೃತ, ವ್ಯಾಕರಣ, ಕಲೆ ಮುಂತಾದವುಗಳನ್ನು ತಮ್ಮ ಕ್ಷೇತ್ರಕ್ಕೆ ಪೂರಕವಾಗಿ ಕಲಿತಿದ್ದರು. ಆದರೆ ಈ ಕಲಿಕೆ ಬದುಕನ್ನು ಕಟ್ಟಿಕೊಡುವಂತದ್ದಾಗಿರಲಿಲ್ಲ. ಇಂತಹ ಸ್ಥಿತ್ಯಂತರದ ಕಾಲದಲ್ಲಿ 'ಸಾದಿರ್' ಪ್ರಕಾರವನ್ನು ಉಳಿಸಿಕೊಳ್ಳಲು ಹೋರಾಟ ನಡೆಸಿದ ಮಹಾನ್ ಪ್ರತಿಭೆಗಳಲ್ಲಿ 'ಬಾಲ ಸರಸ್ವತಿ' ಅಗ್ರಗಣ್ಯರು. ಈ ಹೋರಾಟಕ್ಕೆ ಬುನಾದಿ ಹಾಕಿ ಕೊಟ್ಟವರು. 'ಮೈಲಾಪುರದ ಗೌರಿ ಅಮ್ಮಾಳ್'.

ಚರಿತ್ರೆಯನ್ನು ಗಮನಿಸಿದರೆ ನೃತ್ಯ, ಸಂಗೀತಗಳ ಪೋಷಕ ಕೇಂದ್ರ ತಮಿಳುನಾಡು ಆಗಿತ್ತು. ಈ ನಾಡಿನಲ್ಲಿಯೇ ಎಂ.ಎಲ್. ವಸಂತಕುಮಾರಿ, ಡಿ.ಕೆ. ಪಟ್ಟಮ್ಮಾಳ್, ಎಂ.ಎಸ್. ಸುಬ್ಬಲಕ್ಷ್ಮಿ, ಬಾಲ ಸರಸ್ವತಿ, ಬೆಂಗಳೂರು ನಾಗರತ್ನಮ್ಮ ಮುಂತಾದ ಪ್ರತಿಭೆಗಳು ಬೆಳೆದವು ಮತ್ತು ಪ್ರಜ್ವಲಿಸಿದವು. ಬಹುತೇಕ ಕಲಾವಿದರು ದೇವದಾಸಿ ಹಿನ್ನೆಲೆಯಿಂದ ಬಂದವರಾದರೂ ಸಮಾಜದಲ್ಲಿ ಗೌರವಾನ್ವಿತರಾಗಿ ಬದುಕಿದವರು. ತಮ್ಮ ಪ್ರತಿಭೆಯಿಂದಲೇ ಜಾತಿ, ವರ್ಗಗಳನ್ನು ಮುರಿದು ಮೇಲೇರಿದವರು.

ಬಾಲ ಸರಸ್ವತಿ ತಮ್ಮ ಕೊನೆಯುಸಿರು ಇರುವವರೆಗೂ ಭರತನಾಟ್ಯದ ಮೂಲ ಸ್ವರೂಪ ಬಿಟ್ಟುಕೊಡದೆ ಕಾಪಾಡಿದವರು. ತಮ್ಮ ಸಾಂಪ್ರದಾಯಿಕ ಕಲೆಯನ್ನು ಗೌರವಾನ್ವಿತ ಕುಟುಂಬದ ಮಹಿಳೆಯರಿಗಾಗಿ ಮರುರೂಪಿಸಿ ತಮ್ಮವರನ್ನು ಕೀಳಾಗಿ ಕಾಣತೊಡಗಿದ್ದು ಆತ್ಮಸಮ್ಮಾನದ ಪ್ರಶ್ನೆಯಾಗಿ ಕಾಡುತ್ತದೆ. ಶಾಲೆಗಳಲ್ಲಿ ತಮ್ಮ ಜತೆ ಕುಳಿತು ಕಲಿಯಲಾರದ ಆದರೆ ತಮ್ಮ ಕಲೆಯನ್ನು ಬೇರೆ ಹೆಸರಿನಿಂದ ಕಲಿಯಲಾರಂಭಿಸಿದ ಮೇಲ್ವರ್ಗದವರ ನೀತಿ ಸವಾಲಾಗಿಯೇ ಬಾಲ ಸರಸ್ವತಿಯವರಿಗೆ ತೋರುತ್ತದೆ. ಮೇಲ್ವರ್ಗದವರು ಈ ಕಲೆಯನ್ನು ಹೊಸ ಆವಿಷ್ಕಾರದ ಹೆಸರಿನಲ್ಲಿ ಮರುರೂಪಿಸಿದರಲ್ಲದೆ ತಮ್ಮನ್ನು ಅದರ ವಕ್ತಾರರೆಂಬಂತೆ ಸಾಂಸ್ಕೃತಿಕ ರಾಯಭಾರಿಗಳೆಂಬಂತೆ ಗುರುತಿಸಿಕೊಂಡರು. ಸಾದಿರ್ ಮತ್ತು ಭರತ ನಾಟ್ಯದ ವಿವಾದಗಳ ಒಂದು ಅಂಚಿನಲ್ಲಿ ಬಾಲಸರಸ್ವತಿ ನಿಂತರೆ ಇನ್ನೊಂದು ಅಂಚಿನಲ್ಲಿ ಪ್ರಭಾವಶಾಲೀ ಸಮಾಜದ ಪ್ರತಿನಿಧಿಯಾಗಿ ರುಕ್ಮಿಣೀ ಅರುಂಡೇಲ್ ನಿಲ್ಲುತ್ತಾರೆ. ಒಂದರ್ಥದಲ್ಲಿ ನೃತ್ಯದ ಬ್ರಾಹ್ಮಣೀಕರಣದ ಪ್ರತಿನಿಧಿಯಾಗಿ ರುಕ್ಮಿಣೀದೇವಿ ಅರುಂಡೇಲ್ ನಿಂತರೆ, ಸಾದಿರ್ ಅಥವಾ ದಾಸಿಯಾಟ್ಟಂ ಪ್ರಕಾರದ ಉಳಿವಿಗಾಗಿ ಹೋರಾಡುತ್ತಾ ಅದನ್ನು ತನ್ನ ಶಿಷ್ಯರಿಗೆ ಭೋದಿಸುತ್ತಲೇ ಬದುಕು ಕಳೆದ ಕಲಾತಪಸ್ವಿಯಂತೆ ಬಾಲಸರಸ್ವತಿ ನಿಲ್ಲುತ್ತಾರೆ.

ನೃತ್ಯದಲ್ಲಿ ಶೃಂಗಾರ ಅಶ್ಲೀಲವೆನ್ನುತ್ತಾ ಭಕ್ತಿಯ ಮೂಲಕ ಶುದ್ಧೀಕರಣಕ್ಕೆ ತೊಡಗಿದ ಗುಂಪು ಒಂದು ಕಡೆ ನಿಂತರೆ ಶೃಂಗಾರವೂ ಭಕ್ತಿಯಾಗಿ ಸೇರಿದರೆ ಮಾತ್ರ ಶ್ರೇಷ್ಠನಾಟ್ಯ ಸಾಧ್ಯವಾಗುತ್ತದೆ ಎಂದು ಕಲೆಯ ಮೂಲಕ ಸಾಧಿಸಿ ತೋರಿಸಿದವರು ಬಾಲ ಸರಸ್ವತಿ. ದುರಂತವೆಂದರೆ ದೇಶ, ವಿದೇಶಗಳಲ್ಲಿ ಪ್ರಸಿದ್ಧಿ ಪಡೆದ ನಂತರವೇ ಅವರು ತಮ್ಮ ದೇಶದಲ್ಲಿ ಹೆಸರು ಮಾಡಲು ಸಾಧ್ಯವಾಗಿದ್ದು. ಇದು ಎಂದಿನಂತೆಯೇ ನಮ್ಮ ಸಂಸ್ಕೃತಿಯಲ್ಲಿನ ದೇಸಿ ಮತ್ತು ಮಾರ್ಗಗಳ ಸಂಘರ್ಷದ ಕಥನವಾಗಿಯೇ ತೋರುತ್ತದೆ.

■ **ಅಮೃತಮತಿ**

## ಮಾತೇ ಮುತ್ತು

- ಅಧಿಕಾರ ಎಂಬುವುದು ಸಮಾಜ ಸೇವೆ ಮಾಡುವುದಕ್ಕೆ ಇರುವ ಒಂದು ಅವಕಾಶ.

  —ಎ.ಬಿ. ವಾಜಪೇಯಿ

- ತಪ್ಪು ದಾರಿಯಿಂದ ಗಳಿಸಿಕೊಂಡ ಅಧಿಕಾರದಿಂದ ಒಳಿತನ್ನು ಸಾಧಿಸಲು ಶಕ್ಯವಾಗದು.

  —ಆಲ್‌ಫ್ರೆಡ್ ಟೆನಿಸನ್

- ಮಳೆಯಂತೆ, ಸೂರ್ಯನಂತೆ, ಪ್ರೇಮವೂ ನಮಗೆ ನೆಮ್ಮದಿಯನ್ನು ನೀಡುತ್ತದೆ.

  —ವಿಲಿಯಂ ಶೇಕ್ಸ್‌ಪಿಯರ್

- ನುಡಿಯಲ್ಲಿ ನಡೆಯಲ್ಲಿ ಎಚ್ಚರ ತಪ್ಪಿದರೆ ಹಿಡಿದಿರ್ದ ಲಿಂಗವು ಘಟಸರ್ಪದಂತೆ!

  —ಬಸವಣ್ಣ

- ಯಾರೂ ಇಲ್ಲದ ಮನೆ ಜೀವ ಇಲ್ಲದ ದೇಹದಂತೆ.

  —ಸ್ಯಾಮ್ಯುಯಲ್ ಬಟ್ಲರ್

- ಸ್ವರ್ಗದ ದಾರಿಯಲಿ ಮಿನುಗುತ್ತಿರುವುದು ಪ್ರೇಮ, ಕಿಡಿಯಲ್ಲಿ ಸುಂದರಿಯೆ, ಅದುವೆ ತಾರೆ!

  —ಕೆ.ಎಸ್. ನರಸಿಂಹಸ್ವಾಮಿ